**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 38/2025**

**ಚಾ.ಸಾ. :-1**
**ಪ್ರಾ.ಸಾ. :-1**

| | |
|---|---|
| ಹೆಸರು | : ನಾಸಿರ್ |
| ತಂದೆಯ ಹೆಸರು | : ಜಿಯಾಉಲ್ಲಾ |
| ವಯಸ್ಸು | : 23 ವರ್ಷ |
| ಉದ್ಯೋಗ | : ವಿದ್ಯಾರ್ಥಿ |
| ವಾಸಸ್ಥಳ | : ಶ್ರೀರಂಗಪಟ್ಟಣ. |

---

ಪ್ರಮಾಣೀಕರಿಸಲಾದ ದಿನಾಂಕಃ**- 10.08.2026**

<u>ಮುಖ್ಯ ವಿಚಾರಣೆ **:** ಮಾನ್ಯ ಸ.ಸ.ಅ.ರವರಿಂದ **:**</u>

ಚಾ.ಸಾ-2 ಹಾಗೂ ಮೃತ ಶೇಖ್ ಸರ್ಫೋಜ್ ಉದ್ದೀನ್ ರವರ ಪೂರ್ವ ಪರಿಚಯವಿರಲಿಲ್ಲ, ಅಪಘಾತವಾದ ದಿನ ಪರಿಚಯವಾಗಿರುತ್ತದೆ. ದಿನಾಂಕಃ 08.06.2025 ರಂದು ನಾನು ಪಶ್ಚಿಮ ವಾಹಿನಿಯಿಂದ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದೆ. ಸಮಯ ಸುಮಾರು ಮಧ್ಯಾಹ್ನ 2.00-2.15 ರ ಸಮಯದಲ್ಲಿ ಸಾಯಿಬಾಬಾ ಮಂದಿರದ ಬಳಿ ಇರುವ ಸೇತುವೆಯ ಮೇಲೆ ನನ್ನ ದ್ವಿಚಕ್ರ ವಾಹನದಿಂದ ಸುಮಾರು 200-300 ಮೀ.ದೂರದಲ್ಲಿ ನನ್ನ ಮುಂದೆ ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಒಂದು ಬಸ್ ಡಿಕ್ಕಿಪಡಿಸಿ ಮುಂದೆ ಹೋಗಿರುತ್ತದೆ. ಆ ಸಮಯದಲ್ಲಿ ಸುಮಾರು 3 ಬಸ್ಸುಗಳು ಸದರಿ ಜಾಗದಲ್ಲಿ ಹೋಗುತ್ತಿದ್ದು, ಯಾವ ಬಸ್ ಎಂದು ನನಗೆ ನಿಖರವಾಗಿ ಗೊತ್ತಾಗಿರುವುದಿಲ್ಲ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಒಬ್ಬರು ಮೃತಪಟ್ಟಿದ್ದು, ಬೈಕ್

ಸವಾರ ಚಾ.ಸಾ-2 ರವರಿಗೆ ಗಾಯಗಳಾಗಿದ್ದು, ಸದರಿಯವರು ಕೆಂಪು ಬಣ್ಣದ ಬಸ್ ಡಿಕ್ಕಿಪಡಿಸಿರುವುದಾಗಿ ಹಿಂದಿಯಲ್ಲಿ ನನಗೆ ಹೇಳಿರುತ್ತಾರೆ. ಆ ಸಮಯದಲ್ಲಿ ಒಂದು ಖಾಸಗಿ ಬಸ್, ಅದರ ಹಿಂಬದಿಯಲ್ಲಿ KSRTC Bus ಹಾಗೂ ಅದರ ಪಕ್ಕದಲ್ಲಿ ಮತ್ತೊಂದು KSRTC Bus ಹೋಗುತ್ತಿದ್ದವು, ಆ ಕಾರಣದಿಂದ ನಾನು KSRTC Bus ಅಪಘಾತಪಡಿಸಿರುತ್ತದೆ ಎಂದು ಹೇಳಿ ದೂರು ನೀಡಿರುತ್ತೇನೆ. ಅಪಘಾತದ ನಂತರ ಸದರಿ 3 ಬಸ್ಸುಗಳು ಸ್ಥಳದಲ್ಲಿ ನಿಲ್ಲಿಸಿರುವುದಿಲ್ಲ. ಸದರಿ 3 ಬಸ್ಸುಗಳು ಸುಮಾರು 80 ಕಿ.ಮೀ. ವೇಗದಲ್ಲಿ ಹೋಗುತ್ತಿದ್ದವು. ಬೈಕ್ ಸವಾರನನ್ನು ನಾವು ಶ್ರೀರಂಗಪಟ್ಟಣ ಆಸ್ಪತ್ರೆಗೆ ಟೆಂಪೋ ಮೂಲಕ ಕಳುಹಿಸಿರುತ್ತೇವೆ. ಚಾ.ಸಾ-2 ರವರನ್ನು ಹೆಚ್ಚಿನ ಚಿಕಿತ್ಸೆಗೆ ಕೆ.ಆರ್.ಆಸ್ಪತ್ರೆಗೆ ಕಳುಹಿಸಿರುತ್ತೇವೆ.

ಅಪಘಾತದ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯ ಸಹಿ ಇರುವ ಒಂದು ದಾಖಲೆಯು ದೂರಾಗಿದ್ದು ಅದನ್ನು ಈಗ ನಿಪಿ**-1** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ**-1(**ಎ**)** ಎಂದು ಗುರ್ತಿಸಲಾಯಿತು.

ಪೊಲೀಸರು ಅಪಘಾತಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರ್ ಮಾಡಿರುತ್ತಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸಾಕ್ಷಿಯ ಸಹಿ ಇರುವ ದಾಖಲೆಯು ಮಹಜರ್ ಆಗಿದ್ದು, ಅದನ್ನು ಈಗ ನಿಪಿ**-2** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ**-2(**ಬಿ**)** ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ನನ್ನ ಜೊತೆ ಬೇರೆ ಸಾಕ್ಷಿಗಳು ಸಹ ಹಾಜರಿದ್ದರು. ಸದರಿ ಮಹಜರ್ ನಲ್ಲಿ ಪೊಲೀಸರು ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ತಯಾರು ಮಾಡಿರುತ್ತಾರೆ. ಸದರಿ ಸಹಿಯನ್ನು ನಾನು ಅಪಘಾತ ಸ್ಥಳದ ಬಳಿ ಮಾಡಿರುತ್ತೇನೆ. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿದ್ದು ಅದರಲ್ಲಿ ನನ್ನ ಮತ್ತು ಉಳಿದ ಸಾಕ್ಷಿದಾರರ ಭಾವಚಿತ್ರ ಇರುತ್ತದೆ. ಸದರಿ 2 ಫೋಟೋಗಳನ್ನು ಈಗ ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು.

ಅದೇ ದಿನ ಪೊಲೀಸ್ ಠಾಣಾ ಆವರಣದಲ್ಲಿ ಅಪಘಾತಕ್ಕೆ ಸಂಬಂಧಿಸಿದಂತೆ 1 ವಾಹನವನ್ನು ಪಂಚರ ಸಮಕ್ಷಮ ಮಹಜರ್ ಬರೆದು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-4** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-4(ಎ)** ಎಂದು ಗುರುತಿಸಲಾಯಿತು. ದ್ವಿಚಕ್ರ ವಾಹನದ 2 ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಫೋಟೋಗಳಲ್ಲಿರುವ ಬಸ್ಸನ್ನು ಅಪಘಾತದ ದಿನ ನೋಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

<u>ಪಾಟೀ ಸವಾಲು **:** ಆರೋಪಿ ಪರ ವಕೀಲರಿಂದ **:**</u>

ನನಗೆ ಕನ್ನಡ ಓದಲು ಬರುತ್ತದೆ. ದೂರನ್ನು ಠಾಣೆಯಲ್ಲಿ ತಯಾರು ಮಾಡಿರುತ್ತಾರೆ. ಸದರಿ ರಸ್ತೆಯಲ್ಲಿ ಮೈಸೂರಿನಿಂದ ಬೆಂಗಳೂರು ಕಡೆಗೆ 2 ಭಾರಿ ವಾಹನಗಳು ಏಕಕಾಲದಲ್ಲಿ ಹೋಗಬಹುದು. ನನ್ನ ಮುಂಭಾಗದಲ್ಲಿ 2 KSRTC Bus ಗಳು ಅಕ್ಕಪಕ್ಕದಲ್ಲಿ ಹೋಗುತ್ತಿದ್ದ ಕಾರಣ ಆ ಬಸ್ಸುಗಳ ಮುಂಭಾಗದಲ್ಲಿ ಯಾವ ವಾಹನ ಹೋಗುತ್ತಿತ್ತು ಎಂದು ನನಗೆ ಕಾಣುತ್ತಿರಲಿಲ್ಲ ಎಂದರೆ ಸರಿ. ನಾನು ಅಪಘಾತ ಸ್ಥಳಕ್ಕೆ ಹೋದಾಗ ಚಾ.ಸಾ-2 ರವರು ನನಗೆ KSRTC Bus ಅಪಘಾತಪಡಿಸಿರುತ್ತದೆಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಅವರು KSRTC Bus ಎಂದು ಹೇಳಿಲ್ಲ, ಕೆಂಪು ಬಣ್ಣದ ವಾಹನ ಎಂದು ಹಿಂದಿಯಲ್ಲಿ ಹೇಳಿರುತ್ತಾರೆ ಎನ್ನುತ್ತಾರೆ. ಸಾಕ್ಷಿಗೆ ಪೊಲೀಸರು ಅಂತಿಮ ವರದಿಯಲ್ಲಿ ಹಾಜರುಪಡಿಸಿರುವ ಆರೋಪಿತರ ಬಸ್ಸಿನ ಫೋಟೋಗಳನ್ನು ತೋರಿಸಿ, ಸದರಿ ಬಸ್ ಹಸಿರು ಮತ್ತು ನೀಲಿಯ ಬಣ್ಣದ್ದಾಗಿದ್ದು, ಅದರಲ್ಲಿ ಕೆಂಪು ಬಣ್ಣ ಇರುವುದಿಲ್ಲ ಎಂದರೆ ಸರಿ. ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಬಸ್ಸನ್ನು ಗುರುತಿಸುವ ಬಗ್ಗೆ ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿ.

ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಚಾ.ಸಾ-2 ರವರ ಹೇಳಿಕೆ ಪಡೆದಿಲ್ಲ. ಚಾ.ಸಾ-5 ಮತ್ತು 6 ನನಗೆ ಪರಿಚಯ, ಅವರನ್ನು ನಾನು ಮಹಜರ್ ಸಮಯದಲ್ಲಿ

ಕರೆಯಿಸಿರುತ್ತೇನೆ ಎಂದರೆ ಸುಳ್ಳು. ಮಹಜರನ್ನು ಪೊಲೀಸರು ಸಂಜೆ ಸುಮಾರು 5.00-6.00 ರ ಸಮಯದಲ್ಲಿ ಬರೆದಿರುತ್ತಾರೆ. ಅಪಘಾತವು KSRTC Bus ಚಾಲಕನ ತಪ್ಪಿನಿಂದಾಗಿರುತ್ತದೆ ಎಂದರೆ ಸುಳ್ಳು. ಅಪಘಾತ ಸ್ಥಳಕ್ಕೆ ನಾನು ಹೋದಾಗ ಬೈಕ್ ಹೊರತುಪಡಿಸಿ ಬೇರೆ ವಾಹನಗಳು ಇರಲಿಲ್ಲ ಎಂದರೆ ಸರಿ. ಮೃತರ ಕುಟುಂಬದವರು ನನಗೆ ಪರಿಚಯವಿರುವ ಕಾರಣ ಅವರಿಗೆ ವಿಮೆ ಪರಿಹಾರ ಕೊಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ **:** ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**